## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 512 |
| ಸದಸ್ಯರ ಹೆಸರು | : ಶ್ರೀಮತಿ ಉಮಾಶ್ರೀ<br>: (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : 19.02.2024 |
| ಉತ್ತರಿಸುವವರು | : ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅರಣ್ಯ ಇಲಾಖೆಯಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಹುಲಿ ಸಂರಕ್ಷಿತ ಪ್ರದೇಶಗಳ ವ್ಯಾಪ್ತಿಯ ಒಳಗೆ ಮತ್ತು ರಾಜ್ಯದಲ್ಲಿ ಗುರುತಿಸಲಾದ ಒಟ್ಟು 09 ಆನೆ ಕಾರಿಡಾರ್ ಗಳಲ್ಲಿ ಅಕ್ರಮವಾಗಿ ಲೇಔಟ್ ನಿರ್ಮಾಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.<br><br>ಮುಂದುವರೆದು ಭದ್ರಾ ಹುಲಿ ಸಂರಕ್ಷಿತ ಪ್ರದೇಶದ 10.00 ಕಿ.ಮೀ ವ್ಯಾಪ್ತಿಯ ಒಳಗೆ ಬರುವ ಚಿಕ್ಕಮಗಳೂರು ತಾಲ್ಲೂಕು ಜಾಗರ ಹೋಬಳಿ ಗೋಣಕಲ್ ಗ್ರಾಮ ಮತ್ತು ಮೇಲಿನಹುಲುವತ್ತಿ ಗ್ರಾಮದಲ್ಲಿ ಎಸ್ಟೇಟ್ ಮತ್ತು ವಿಲ್ಲಾ ನಿರ್ಮಿಸಲು ಯೋಜನೆಯನ್ನು ದಿ" ರೈನ್ ಬೋ ಪ್ರಾಜೆಕ್ಟ್ ಮತ್ತು ಜೈನ್ ಫಾರ್ಮ ಲ್ಯಾಂಡ್ / ರೆಸಾರ್ಟ್ಸ್ / ಕಾಫಿ ಎಸ್ಟೇಟ್ಸ್" ರವರು ರೂಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ಪ್ರಸ್ತಾಪಿತ ಪ್ರದೇಶಗಳು ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ಪರಿಭಾವಿತ 10.00 ಕಿ.ಮೀ ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಯಲ್ಲಿ ಬರುತ್ತಿದ್ದು, ಈ ಪ್ರದೇಶದಲ್ಲಿ ಪ್ರಸ್ತುತ ಇರುವಂತಹ ಭೂಮಿಯನ್ನು ವಿಂಗಡಣೆ ಮಾಡಿ ಸಣ್ಣ ಸಣ್ಣ ತುಂಡಗಳಾಗಿ ಪರಿವರ್ತಿಸಿ ಅಭಿವೃಧಿಪಡಿಸುವುದುರಿದಂದ ನದಿ ಮೂಲಗಳು ಕಲುಷಿತವಾಗಿ ಜೀವ ವೈವಿಧ್ಯತೆಗೆ ಹಾಗೂ ವನ್ಯಜೀವಿಗಳ ಆವಾಸ ಸ್ಥಾನಕ್ಕೆ ಧಕ್ಕೆ ಉಂಟಾಗುತ್ತದೆ. ಅಲ್ಲದೇ ವನ್ಯಪ್ರಾಣಿಗಳ ಓಡಾಟಕ್ಕೆ ಧಕ್ಕೆ ಉಂಟಾಗಿ ಮಾನವ-ವನ್ಯಜೀವಿ ಸಂಘರ್ಷ ಹೆಚ್ಚಾಗುವ ಸಂಭವವಿರುತ್ತದೆ .<br><br>ಆದುದರಿಂದ ಈ ಕುರಿತು ಕೇಂದ್ರ ಸರ್ಕಾರದ ಮಾರ್ಗಸೂಚಿ ದಿನಾಂಕ: 09/02/2011 ರನ್ವಯ ಕ್ರಮ ಕೈಗೊಳ್ಳುವಂತೆ ಜಿಲ್ಲಾಡಳಿತಕ್ಕೆ ನಿರ್ದೇಶಿಸಲಾಗಿದೆ. |
| ಆ) | ಇತ್ತೀಚಿಗೆ ಕಾಫಿ ನಾಡು ಚಿಕ್ಕಮಗಳೂರಿನ ಪರಿಸರ ಸೂಕ್ಷ್ಮ ಪ್ರದೇಶಗಳಾದ ಹುಲಿ ಸಂರಕ್ಷಿತ ಪ್ರದೇಶ ಮತ್ತು ಆನೆ ಕಾರಿಡಾರನ ಬಫರ್ ವಲಯಗಳಲ್ಲಿ ಜೈನ್ ಕಾಫಿ ಬೈ ದಿ ಸ್ಟ್ರೀಮ್ ಮತ್ತು ದಿ ರೈನ್ ಬೊ ಎಂಬ ರಿಯಲ್ ಎಸ್ಟೇಟ್ ಕಂಪನಿಗಳು ಲೇಔಟ್ ಮತ್ತು ವಿಲ್ಲಾಗಳನ್ನು ನಿರ್ಮಿಸಲು ಹೊರಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಕಂಪನಿಗಳ ವಿರುದ್ಧ ಕೈಗೊಂಡ ಕ್ರಮಗಳೇನು; | |
| ಇ) | ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? | |

**ಸಂಖ್ಯೆ: ಅಪಜೀ 32 ಎಫ್‌ಡಬ್ಲ್ಯೂಎಲ್ 2024**

**(ಈಶ್ವರ ಬಿ. ಖಂಡ್ರೆ)**
ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಈಶ್ವರ ಬಿ. ಖಂಡ್ರೆ
ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು